**ದಿನಾಂಕಃ01-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-ವಾದಿಯ ಪರ ಶ್ರೀ.ವಿ.ಎಲ್.ಎನ್, ವಕೀಲರಿಂದ:-**

**2.** ನಾನು 28 ನೇ ವರ್ಷಕ್ಕೆ ಮದುವೆ ಆಗಿರುತ್ತೇನೆ, ಅಂದರೆ 1998 ನೇ ಇಸವಿಯಲ್ಲಿ ನನ್ನ ಮದುವೆ ಆಗಿತ್ತು. ನನ್ನ ಮದುವೆ ಆಗಿ 24 ವರ್ಷಗಳು ಕಳೆದಿದೆ. ನನ್ನ ಮದುವೆಯ ಮೊದಲು ನಾನು ಗವಿನಾಗಮಂಗಲ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಪ್ರಸ್ತುತವಾಗಿ ನಾನು ಸದರಿ ಗ್ರಾಮದಲ್ಲಿಯೇ ವಾಸಿಸುತ್ತಿದ್ದೇನೆ. ನನಗೆ ಇಬ್ಬರು ಮಕ್ಕಳು ಇದ್ದಾರೆ. ನನ್ನ ಮಗನಿಗೆ 23 ವರ್ಷ ವಯಸ್ಸಾಗಿದೆ ಮತ್ತು ಮಗಳಿಗೆ 22 ವರ್ಷ ವಯಸ್ಸಾಗಿದೆ. ಅವರಿಬ್ಬರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ನನ್ನ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ನಾನು ಮದುವೆಯ ಮೊದಲಿನಿಂದಲೂ ವ್ಯವಸಾಯವನ್ನು ಮಾಡುತ್ತಿದ್ದೇನೆ.

3. ವಾದಿಯು ನನ್ನ ಅಣ್ಣನಾಗಿರುತ್ತಾರೆ ಮತ್ತು ಅವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ವಾದಿಯು ನನಗಿಂತ ವಯಸ್ಸಿನಲ್ಲಿ 2 ವರ್ಷ ದೊಡ್ಡವರಾಗಿದ್ದಾರೆ. ನನ್ನ ತಂಗಿಯರ ಹೆಸರು ದೇವರಾಜಮ್ಮ ಮತ್ತು ಮಂಜುಳ ಆಗಿದೆ. ನಿಮ್ಮ ತಂದೆಯು ಬದುಕಿದ್ದಾಗಲೇ ನಿಮ್ಮ ತಂಗಿಯಂದಿರ ಮದುವೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ಸರ್ಕಾರಿ ನೌಕರಾಗಿದ್ದ ಕಾರಣದಿಂದ ಅವರೇ ಆರ್ಥಿಕವಾಗಿ ನಿಮ್ಮ ತಂಗಿಯಂದಿರ ಮದುವೆಗೆ ಸಹಾಯವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ತಾಯಿಯ ಹೆಸರು ಮಾಯಮ್ಮ. 1997 ನೇ ಇಸವಿಯಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. ನನ್ನ ತಂದೆ 2010 ನೇ ಇಸವಿಯಲ್ಲಿ

ಮೃತಪಟ್ಟಿರುತ್ತಾರೆ. ಈಗ ಸಾಕ್ಷಿಗೆ ನಿಪಿ-7 ನ್ನು ತೋರಿಸಿದ್ದು, ಅದರಲ್ಲಿ ನಿಮ್ಮ, ವಾದಿ ಮತ್ತು ನಿಮ್ಮ ತಂದೆಯ ಸಹಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಸಹಿಯನ್ನು ನಿಪಿ-7(ಎ) ರಿಂದ 7(ಸಿ) ಎಂದು ಗುರುತಿಸಲಾಯಿತು. ನಿಪಿ-7 ಕ್ಕೆ ಸಾಕ್ಷಿದಾರರು ಸಹ ಸಹಿಯನ್ನು ಹಾಕಿದ್ದಾರೆ.

4. ನಿಪಿ-7 ರಂತೆ ನಿಮಗೆ ಯಾವ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ನಾಗಮಂಗಲ ಗ್ರಾಮದ ಸರ್ವೆ ನಂ.38/2 ರಲ್ಲಿ 2 ಎಕರೆ 13 ಗುಂಟೆ , ಸರ್ವೆ ನಂ.42/1 ಬಿ ರಲ್ಲಿ 1 ಎಕರೆ 10 ಗುಂಟೆ, ಸರ್ವೆ ನಂ. 41/2 ರಲ್ಲಿ 1 ಎಕರೆ 25 ಗುಂಟೆ , ರಂಗಚಾರಿ ಪಾಳ್ಯದಲ್ಲಿ ಗ್ರಾಮದ ಸರ್ವೆ ನಂ. 22/1 ಮತ್ತು 22/2 ರಲ್ಲಿ 4 ಎಕರೆ 25 ಗುಂಟೆ ಜಮೀನು ಬಂದಿದೆ ಎನ್ನುತ್ತಾರೆ. ನಾಗಮಂಗಲ ಗ್ರಾಮದ ಸರ್ವೆ ನಂ.32/19 ಮತ್ತು ಸರ್ವೆ ನಂ. 32/20 ರಲ್ಲಿ 5 ಎಕರೆ ಮತ್ತು ಸರ್ವೆ ನಂ. 41 ರಲ್ಲಿ 2 ಎಕರೆ 17 ಗುಂಟೆ ಜಮೀನು ವಾದಿಗೆ ನಿಪಿ-7 ರಂತೆ ನೀಡಲಾಗಿರುತ್ತದೆ. ಈ ಮೇಲೆ ಹೇಳಿರುವ ಸ್ವತ್ತುಗಳನ್ನು ಹೊರತುಪಡಿಸಿ ನಿಪಿ-7 ರಂತೆ ನನ್ನ ತಂದೆಗೂ ಸಹ ಸರ್ವೆ ನಂ.76/2 ಎಂ ರಲ್ಲಿ 1 ಎಕರೆ ಜಮೀನನ್ನು ನೀಡಲಾಗಿರುತ್ತದೆ. ದಾವಾ ಸ್ವತ್ತಿನ ಸರ್ವೆ ನಂ.42/1 ಬಿ ಆಗಿದೆ. ದಾವಾಸ್ವತ್ತು ನನ್ನ ತಾತನವರಿಗೆ ದಾನಪತ್ರದ ಮೂಲಕ ಬಂದಿರುತ್ತದೆ ಮತ್ತು ಅವರ ನಂತರ ನನ್ನ ತಂದೆಗೆ ಬಂದಿರುತ್ತದೆ. ದಾವಾಸ್ವತ್ತು ಪಿತ್ರಾರ್ಜಿತ ಆಸ್ತಿ ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

5. ಈ ದಾವೆಯನ್ನು ಹೊರತುಪಡಿಸಿ ವಾದಿಯು ನಿಮ್ಮ ವಿರುದ್ದ ಓ. ಎಸ್ 270/2010 ರಂತೆ ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಸ್ತುತ ದಾವೆ ಮತ್ತು ಈ ಮೇಲೆ ಹೇಳಿರುವ ದಾವೆಯನ್ನು ಹೊರತುಪಡಿಸಿ ನನ್ನ ವಿರುದ್ದ ಯಾವುದೇ ದಾವೆ ಇರುವುದಿಲ್ಲ. ಈಗ ಸಾಕ್ಷಿಗೆ

ನಿಪಿ-7 ನ್ನು ತೋರಿಸಿದ್ದು, ಅದರಲ್ಲಿ "ಇದುವರೆಗೆ ಜಮೀನು ಅಭಿವೃದ್ದಿ ----------- ವ್ಯವಹಾರವನ್ನು ಜರುಗಿಸತಕ್ಕದ್ದಾಗಿ ಒಪ್ಪಿರುತ್ತಾರೆ " ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ. 03-07-2000 ರಂದು ನಾನು ನಿಪಿ-3 ರಂತೆ ದಾವಾಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನನ್ನ ಸಾಲ ವನ್ನು ಮತ್ತು ನನ್ನ ತಂಗಿಯಂದಿರ ಮದುವೆ ಮಾಡುವ ಸಮಯದಲ್ಲಿ ಆಗಿದ್ದ ಸಾಲವನ್ನು ತೀರಿಸುವ ಸಲುವಾಗಿ ನಾನು ದಾವಾಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನಿಪಿ-3 ರಲ್ಲಿ ನನ್ನ ತಂಗಿಯಂದಿರ ಮದುವೆ ಸಮಯದಲ್ಲಿ ಮಾಡಿದ್ದ ಸಾಲವನ್ನು ತೀರಿಸುವ ಸಲುವಾಗಿ ದಾವಾಸ್ವತ್ತನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನಮೂದಿಸಿರುವುದಿಲ್ಲ. ವಾದಿ ಮತ್ತು ನಿಮ್ಮ ತಂದೆಯವರು ನಿಮ್ಮ ತಂಗಿಯರ ಮದುವೆಯನ್ನು ಮಾಡಿರುತ್ತಾರೆ ಮತ್ತು ನಿಮ್ಮ ವೈಯಕ್ತಿಕ ಸಾಲಗಳಿಗಾಗಿ ನೀವು ನಿಪಿ-3 ರಂತೆ 2 ನೇ ಪ್ರತಿವಾದಿಗೆ ದಾವಾಸ್ವತ್ತನ್ನು ಮಾರಾಟ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**